ನೀವು ತಾನೇ? 'ಅವನಿಗೆ ಒಮ್ಮೆ ಫೋನು ಮಾಡಿ' ಕೇಳಿ ಎಂದರು.

'ನಿನ್ನ ಕರ್ಮ!' ಎಂದು ಹೆಂಡತಿಯಲ್ಲಿ ಕೋಪಿಸಿಕೊಂಡ ಈಶ್ವರ ಭಟ್ಟರು ಶಂಕರನನ್ನು ದೂರವಾಣಿಯಲ್ಲಿ ಸಂಪರ್ಕಿಸಿ 'ನನ್ನ ಹೆಂಡತಿ ಬಲಮುರಿ ಶಂಖವನ್ನು ಜಾಗ್ರತೆವಹಿಸಿ ಇಡಲು ನಿನ್ನಲ್ಲಿ ನಾನು ಹೇಳಿದಲ್ಲವಾ? ಆದರೆ ಶಂಖ ಇಲ್ಲಿ ಎಲ್ಲೂ ಕಾಣುವುದಿಲ್ಲವಲ್ಲ?' ಎಂದು ಪ್ರಶ್ನಿಸಿದರು.

ಶಂಕರ 'ನೀವು ಹೇಳಿದ್ದು ಹೌದು. ಆದರೆ ನಾನು ಅದರ ಗೊಡವೆಗೆ ಹೋಗಲಿಲ್ಲ. ಅದನ್ನು ಶಂಭಟ್ಟರು ಅಲ್ಲೇ ಎಲ್ಲೋ ಇಟ್ಟಿರಬೇಕು' ಎಂದು ಕೈತೊಳೆದುಕೊಂಡ. ಈಶ್ವರ ಭಟ್ಟರಿಗೆ ದಿಗಿಲಾಯಿತು. ಪುರೋಹಿತ ಶಂಭಟ್ಟರು ಎಂಥವರೆಂದು ತನಗೆ ಗೊತ್ತು. ಅವರ ಮೇಲೆ ಸಂಶಯಿಸುವುದಾಗಲೀ ಪ್ರಶ್ನಿಸುವುದಾಗಲೀ ಸರಿ ಅಲ್ಲ ಎಂದುಕೊಂಡ ಅವರು ಇದು ದೊಡ್ಡ ಕತೆಯಾಯಿತಲ್ಲ ಎಂದುಕೊಂಡು ದೇವರ ಮೇಲೆ ಹಾಕಿದ್ದ 'ನಿರ್ಮಾಲ್ಯ' (ಪೂಜೆ ಆದ ನಂತರ ಎಸೆಯಲು ತೆಗೆದಿಟ್ಟ ಹೂವಿನ ರಾಶಿ)ವನ್ನು ಹೊರಗೆ ಒಯ್ದು ತೆಂಗಿನ ಬುಡಕ್ಕೆ ಹಾಕಿದ ಸ್ಥಳವನ್ನು ಪರಿಶೀಲಿಸಿದರು. ಅಲ್ಲೂ ಶಂಖ ಸಿಗದೆ ತಲೆಗೆ ಕೈ ಇಟ್ಟು ಕುಳಿತರು.

ದೇವಕಿ ಅಮ್ಮ ಆತಂಕದಲ್ಲಿ ಗಂಡನ ಇದಿರು ಕುಳಿತು 'ಈಗೆಂತ ಮಾಡುವುದು?' ಎಂಬಂತೆ ಮೌನವಾದರು. ಈಶ್ವರ ಭಟ್ಟರು ಹೆಂಡತಿಯನ್ನು ಮಾತನಾಡಿಸಲಿಲ್ಲ. 'ಎಲ್ಲಿ ಹೋಯಿತು ಬಲಮುರಿ ಶಂಖ?' ಎಂದು ಚಿಂತೆಗೀಡಾಗಿ ಆ ರಾತ್ರೆ ನಿದ್ದೆಗೆಟ್ಟರು. ಮರುದಿನ ಬೆಳಿಗ್ಗೆ ಉಪಾಹಾರ ತೀರಿಸಿದವರೇ ಶಂಭಟ್ಟರ ಮನೆಗೆ ಬಂದು 'ಭಟ್ರೇ ನಿಮಗೆ ಪುರುಸೊತ್ತು ಉಂಟೋ ಇಲ್ಲವೋ ಗೊತ್ತಿಲ್ಲ. ನನಗೊಂದು 'ಪ್ರಶ್ನೆ ಚಿಂತನೆ' ಆಗಬೇಕಿತ್ತು!' ಎಂದು ಕೈಮುಗಿದರು.

ಶಂಭಟ್ಟರು 'ನನಗೆ ಈ ದಿನ ಎಲ್ಲೂ ಪೌರೋಹಿತ್ಯ ಇಲ್ಲ ಇವರೇ. ರಾತ್ರೆ ಒಂದು ದುರ್ಗಾ ಹೋಮ ಇದೆ ಅಷ್ಟೇ' ಎಂದು ನಗುತ್ತಾ 'ಯಾವುದಕ್ಕೆ ಪ್ರಶ್ನೆ?' ಎಂದು ಪ್ರಶ್ನಿಸಿ 'ನೀವು ಹೀಗೆ ಪ್ರಶ್ನೆ ಚಿಂತನೆ ನಡೆಸಿದ್ದು ಇಲ್ಲವೇ ಇಲ್ಲವಲ್ಲ?' ಎಂದರು. ಈಶ್ವರ ಭಟ್ಟರು ಹೇಳಬೇಕೋ ಬೇಡವೋ ಎಂದು ತರ್ಕಿಸಿ ಆ ಮೇಲೆ ಬಲಮುರಿ ಶಂಖ ಕಾಣೆಯಾದದ್ದನ್ನು ಹೇಳಿ 'ನಾನು ಯಾರ ಮೇಲೂ ಆರೋಪ ಹೊರಿಸುವುದಿಲ್ಲ. ಆದರೂ ನನಗೊಬ್ಬರಲ್ಲಿ ಸಂಶಯ ಇದೆ' ಎಂದು ತುಟಿಕಚ್ಚಿ 'ನೀವು ಅಭಿಷೇಕ ಮಾಡಿದ ಆ ಬಲಮುರಿ ಶಂಖ ದೇವರ ಗುಂಡದಲ್ಲಿ ಕಾಣುವುದಿಲ್ಲ. ಯಾರು ಅದಕ್ಕೆ ಕೈ ಕೊಟ್ಟರು ಎಂದು ಒಂದೂ ಅರ್ಥವಾಗುವುದಿಲ್ಲ' ಎಂದು ಮುಜುಗರಪಡುತ್ತಲೇ ಹೇಳಿದರು.

ಶಂಭಟ್ಟರು 'ಹೌದಾ?' ಎಂದು ಆಶ್ಚರ್ಯಚಕಿತರಾಗಿ ಪ್ರಶ್ನೆ ಚಿಂತನೆಯಲ್ಲಿ ಇಂಥ ಪ್ರಕರಣ ಸಾಬೀತಾಗುವುದು ಕಷ್ಟ. ಹಾಗಾಗಿ 'ಯಾರು ಕದ್ದಿದ್ದಾರೆ?' ಎಂದು ಪ್ರಶ್ನಿಸುವ ಬದಲು, ಕಳವಾದ ವಸ್ತು ಮರಳಿ ಸಿಗುತ್ತದೋ ಇಲ್ಲವೋ ಎಂದು ನೋಡೋಣ" ಎಂದು ಕವಡೆ ಹಾಕಿ 'ನೋಡಿ ಇವರೇ ಆರು ತಿಂಗಳಲ್ಲಿ ನಿಮ್ಮ ಶಂಖ ಸಿಗುತ್ತದೆ. ಭಯ ಬೇಡ' ಎಂದರು. ವಾರದ ಮೇಲೆ ದುಗ್ಗೋಜಿ ಮಾಸ್ತ್ರನ್ನು ಭೇಟಿಯಾದ ಈಶ್ವರ ಭಟ್ಟರು 'ಇಂಥ ಒಂದು ಸಮಸ್ಯೆ ಆಗಿದೆ ಮಾಸ್ತ್ರೇ. ಯಾರನ್ನು ನಂಬುವುದು? ಯಾರನ್ನು ನಂಬದಿರುವುದು?' ಎನ್ನುತ್ತಾ ಬಲಮುರಿ ಶಂಖ ಕಾಣೆಯಾದ ವಿಷಯವನ್ನು ಪ್ರಸ್ತಾಪಿಸಿದರು.

ಈಶ್ವರ ಭಟ್ಟರು ದುಗ್ಗೋಜಿ ಮಾಸ್ತ್ರ ಹಳೆ ವಿದ್ಯಾರ್ಥಿ. ವರುಷಕ್ಕೆ ಒಂದೆರಡು ಸಲ ಮಾಸ್ತ್ರು ಇದ್ದಲ್ಲಿಗೆ ಹೋಗಿ ತಮ್ಮಲ್ಲಿ ಬೆಳೆದ ಮಾವಿನ ಹಣ್ಣನ್ನೋ ಬಾಳೆಗೊನೆಯನ್ನೋ ಅವರು ಮಾಸ್ತ್ರಿಗೆ ಕೊಟ್ಟು ಬರುವುದಿತ್ತು. ದುಗ್ಗೋಜಿ ಮಾಸ್ತ್ರು ಎಲ್ಲವನ್ನೂ ಕೇಳಿಸಿಕೊಂಡು 'ಛೆ! ಛೆ!' ಎಂದು ನೊಂದುಕೊಂಡರು. 'ಎಂಥ ಶತರುದ್ರಾಭಿಷೇಕ ಮಾರಾಯ ಈ ಸಲ ನೀನು ಮಾಡಿಸಿದ್ದು?' ಎಂದು ಈಶ್ವರ ಭಟ್ಟರನ್ನು ಬಾಯಿ ತುಂಬಾ ಹೊಗಳಿ 'ನೀವು ಈಗ ಆ ಕಳ್ಳತನದ ಆರೋಪ ಯಾರ ಮೇಲೆ ಮಾಡುವುದು?' ಎಂದು ಪ್ರಶ್ನಿಸಿದರು. ಈಶ್ವರ ಭಟ್ಟರಿಗೆ ಬಾಯಿ ಬರಲಿಲ್ಲ. 'ಬ್ಬೆ' 'ಬ್ಬೆ' 'ಬ್ಬೆ' ಎನ್ನುತ್ತಾ ಅವರು 'ಶಂಭಟ್ಟರ ಮೇಲೆ ಆರೋಪ ಹಾಕಲಿಕ್ಕೆ ಆಗುತ್ತದಾ?' ಎಂದರು.


ತಕ್ಷಣ ದುಗ್ಗೋಜಿ ಮಾಸ್ತ್ರು 'ಅದು ಮಹಾಪಾಪ, ಮಹಾಪಾಪ' ಎನ್ನುತ್ತಿದ್ದ ಹಾಗೇ ಈಶ್ವರ ಭಟ್ಟರು 'ನಾವು ಪರಿಕರ್ಮಿ ಶಂಕರನ ಮೇಲೆ ಆರೋಪ ಮಾಡಬೇಕಾಗುತ್ತದಲ್ಲಾ?' ಎಂಬ ಬಾಣ ಬಿಟ್ಟರು. ದುಗ್ಗೋಜಿ ಮಾಸ್ತ್ರು ಮಾತೆತ್ತಲಿಲ್ಲ. ಈಶ್ವರ ಭಟ್ಟರ ಕಣ್ಣಲ್ಲಿ ಕಣ್ಣಿಟ್ಟು 'ಪಾಪ, ಶಂಕರ ಬಡಪಾಯಿ. ಆದರೆ ಅವನು ಕದಿಯಲಾರ' ಎಂದರು. ಈಶ್ವರ ಭಟ್ಟರಿಗೆ ಮಾತು ಮುಂದುವರಿಸಲಾಗಲಿಲ್ಲ.

ವಾರದ ಮೇಲೆ ಸೀತಾಪುರ ಬೀದಿಯ ರಾಂಭಟ್ಟರ ದಿನಸಿ ಅಂಗಡಿಯಲ್ಲಿ ಕುಪ್ಪಣ್ಣಯ್ಯನವರ ಚಹಾದ ಹೋಟೆಲಿನಲ್ಲಿ ಶಾಂತಿಮೂಲೆ ಈಶ್ವರ ಭಟ್ಟರ ಬಲಮುರಿ ಶಂಖ ಕಳವಾಗಿದೆಯಂತೆ ಎನ್ನುವುದು ಮುಂದೆ ಬಂತು. ಯಾರಿಂದ ಈ ಕೆಲಸ ಆಗಿರಬಹುದು? ಎಂಬ ಚಿಂತನೆಯು ಹರಡಿ ಅದಕ್ಕೆ ಪರಿಹಾರ ಸಿಕ್ಕದೆ, ಅದು ಪರಿಕರ್ಮಿ ಶಂಕರನದ್ದೆ 'ಕಾರುಬಾರು' ಇರಬೇಕು ಎಂಬಲ್ಲಿಗೆ ಬಂದು ಮುಟ್ಟಿತು. ಪರಿಕರ್ಮಿ ಶಂಕರನಿಗೆ ಇದಾವುದರ ಸುಳಿವೂ ಇರಲಿಲ್ಲ. ಆದರೆ ಕಳೆದ ಒಂದು ತಿಂಗಳಿಂದ ಪೌರೋಹಿತ್ಯಕ್ಕೆ ಶಂಭಟ್ಟರು ಹೊರಟು ನಿಂತಾಗ ಶಂಕರನಿಗೆ 'ನೀನು ಪರಿಕರ್ಮಕ್ಕೆ ಬೇಡ ಅನ್ನುತ್ತಾರೆ ಜನ. ನನಗೆ ನೀನಿಲ್ಲದೆ ಕಷ್ಟವಾಗುವುದೂ ನಿಜ. ಆದರೆ ನನ್ನನ್ನು ಕರೆಯುವವರು ನೀನು ಬರುವುದು ಬೇಡ ಅಂದರೆ ನಾನೇನು ಮಾಡಲಿ?' ಎನ್ನತೊಡಗಿದರು.

ಶಂಕರನಿಗೆ 'ದಿನ ಹೋಗುವುದು' ಶಂಭಟ್ಟರ ಜೊತೆ ಅವನು ಪರಿಕರ್ಮಿ ಕೆಲಸಕ್ಕೆ ಹೋದರೆ ಮಾತ್ರ. ಆ ಪರಿಚಾರಿಕೆ ಅವನ ಜೀವನ ನಿರ್ವಹಣೆಗೆ ನಿಜವಾದ ದಾರಿಯಾಗಿತ್ತು. ಶಂಭಟ್ಟರೂ ತಾವು ಮಾಡುವ ಪ್ರತಿಯೊಂದು ಕೆಲಸಗಳಿಗೆ ಅವನನ್ನು ತಪ್ಪದೇ ಕರೆಯುತ್ತಿದ್ದರು. ಅವನಿಲ್ಲದೆ ನನಗೆ 'ಸುಧಾರಿಸುವುದು ಕಷ್ಟ!' ಎಂದು ತಮ್ಮನ್ನು ಪೌರೋಹಿತ್ಯಕ್ಕೆ ಕರೆಯುವವರಿಗೆ ಅವರು ಹೇಳುತ್ತಿದ್ದರೂ ಜನ ಅದಕ್ಕೆ ಮನ್ನಣೆ ನೀಡಲಿಲ್ಲ. ಈ ಘಟನೆಯ ನಂತರ ಶಂಕರನ ಊಟಕ್ಕೆ ತತ್ವಾರ ಆಯಿತು. ಶಂಭಟ್ಟರು ಬೇಡ ಎಂದು ಕೈ ಎತ್ತಿದ ಮೇಲೆ ತನಗೆ ಇನ್ನಾರು ಗತಿ ಎಂದು ಆತ ಅನಾಥನಂತಾದ. ಆಗ ಆತನಿಗೆ ಇದಕ್ಕಿದ್ದ ಹಾಗೆ ದುಗ್ಗೋಜಿ ಮಾಸ್ತ್ರ ನೆನಪಾಯಿತು. ಒಂದು ಸಂಜೆ ಅವರ ಮನೆ ಬಾಗಿಲಿಗೆ ಹೋಗಿ ಅವರಲ್ಲಿ ತನ್ನ ಸಂಕಷ್ಟವನ್ನು ಹೇಳಿ 'ನಾನು ಶಂಖವನ್ನು ಕದಿಯದೆ ಈಗ ನಮ್ಮ ಜನರಿಂದ ಕಳ್ಳ ಎಂಬಂತಾದೆ ಮಾಸ್ತ್ರೇ' ಎಂದು ಹೇಳಿ 'ಇದಕ್ಕೆ ಪರಿಹಾರ ಅಂದರೆ ನಾನು ಊರು ಬಿಡುವುದು' ಅಂದ.

ದುಗ್ಗೋಜಿ ಮಾಸ್ತ್ರು ಸ್ವಲ್ಪ ಹೊತ್ತು ಮೌನವಾದರು. ಆಮೇಲೆ ಏನೋ ಹೊಳೆದಂತೆ 'ಮಗೂs ನೀನು ಅವಸರಪಡುವುದು ಬೇಡ. ನನಗೆ ಒಂದು ಯೋಚನೆ ಹೊಳೆಯುತ್ತಿದೆ. ನಮ್ಮ ಊರಿನ ಪಂಜುರ್ಲಿ ದೈವದ ಕಾರ್ಣಿಕ ನಿನಗೂ ಗೊತ್ತುಂಟಲ್ಲ?' ಎಂದು ಪ್ರಶ್ನಿಸಿ 'ನೀನು ಊರು ಬಿಟ್ಟು ಹೋಗುವುದಾಗಿಯೂ, ಪಂಜುರ್ಲಿ ದೈವಕ್ಕೆ ಸತ್ಯ ಹೊರ ಹಾಕಲಿ ಎಂದು ಹರಕೆ ಹೊತ್ತಿದ್ದೇನೆ' ಎಂಬುದಾಗಿಯೂ ನಾಳೆ ಕುಪ್ಪಣ್ಣಯ್ಯನವರ ಹೋಟೆಲಿಗೆ ಹೋಗಿ ಅಲ್ಲಿ ನಾಲ್ಕು ಜನ ಇರುವಾಗ ಹೇಳು. ಆದರೆ ತಪ್ಪಿಯೂ ನೀನು ಊರು ಬಿಡಬಾರದು' ಎಂದರು. ಆಮೇಲೆ ಗಂಭೀರವದನರಾಗಿ 'ನಾನು ನಾಳೆ ಹಾಲಿನ ಡೈರಿಯಲ್ಲಿ ಈ ಮಾತನ್ನು ಹರಿಯಬಿಡುತ್ತೇನೆ. ಇದು ವಾರದೊಳಗೆ ಊರಿನಲ್ಲಿ ಸುದ್ದಿಯಾಗಿ ಏನು ಫಲಿತಾಂಶ ಬರುತ್ತದೆ ನೋಡೋಣ' ಎಂದರು.

ಶಂಕರ ಮಾತನಾಡಲಿಲ್ಲ. ದುಗ್ಗೋಜಿ ಮಾಸ್ತ್ರು 'ನನಗೆ ಈ ದೈವ ದೇವರುಗಳಲ್ಲಿ ವಿಶೇಷ ನಂಬಿಕೆ ಇಲ್ಲ ಮಗೂs. ಆದರೆ ಸತ್ಯವನ್ನು ಹೊರಹಾಕಲು ಇಂಥ ದೈವ ದೇವರುಗಳೂ ಬೇಕಾಗುತ್ತವೆ' ಎಂದರು. ಶಂಕರ ಅದಕ್ಕೂ ಪ್ರತಿಕ್ರಿಯೆ ಕೊಡಲಿಲ್ಲ. ವಾರದ ಮೇಲೆ ಶಂಕರ ದುಗ್ಗೋಜಿ ಮಾಸ್ತ್ರ ಮನೆಗೆ ಬೆಳ್ಳಂಬೆಳಗ್ಗೆ ಓಡುತ್ತಾ ಬಂದ. ಬಂದವನೇ ಬಾಯಿ ತುಂಬ ನಗೆ ತಂದುಕೊಂಡು 'ಆ ಬಲಮುರಿ ಶಂಖ ಈಶ್ವರ ಭಟ್ಟರ ಅಂಗಳದ ತೆಂಗಿನ ಮರದ ಬುಡದಲ್ಲಿ ದೇವರ ನೈರ್ಮಾಲ್ಯವನ್ನು ಎಸೆದ ಸ್ಥಳದಲ್ಲಿ ಇತ್ತಂತೆ' ಎಂದ. ದುಗ್ಗೋಜಿ ಮಾಸ್ತ್ರು ನಗುತ್ತಾ 'ಪಂಜುರ್ಲಿ ದೈವದ ಕಾರ್ಣಿಕ ಅದ್ಭುತ' ಎಂದರು.



ಪ್ರತಿಕ್ರಿಯಿಸಿ: feedback@sudha.co.in